O.S .No.266/2022
PW-4

ದಿನಾಂಕ: 05.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ. ವಕೀಲರಿಂದಃ

ಬಿ.ಆರ್,ಕಾವಲ್ ಹಾಗೂ ಹುಣಸೂರಿಗೂ 20 ಕಿ.ಮೀ ಅಂತರ ಇದೆ. ಬಿ.ಆರ್,ಕಾವಲ್ ನಿಂದ ಹನಗೋಡಿಗೂ 3 ಕಿ.ಮೀ ಅಂತರ ಇದೆ. ವಾದಿ ಗೊತ್ತು, ಈಗ್ಗೆ 30 ವರ್ಷಗಳಿಂದ ಪರಿಚಯ. ವಾದಿಗೆ 25 ವರ್ಷ ವಯಸ್ಸಾಗಿದೆ. ನ್ಯಾಯಾಲಯದ ಮುಂದೆ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ದಾವೆಯ ಪ್ರತಿವಾದಿ ಗೊತ್ತು. ಅವರು ಮಂಜುಳ ಎಂದು ಹೇಳುತ್ತಾರೆ. ಸದರಿಯವರು ಹನಗೋಡಿನ ವಾಸಿ. ಮಂಜುಳ ರವರು ಮದುವೆಯಾಗಿ ಹೋಗಿದ್ದು, ಯಾವ ಊರಿನಲ್ಲಿದ್ದಾರೆಂದು ಗೊತ್ತಿಲ್ಲ. ನೀವು ವಾದಿಯರೊಂದಿಗೆ ಹಣಕಾಸಿನ ವ್ಯವಹಾರ ಇಟ್ಟುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯೊಂದಿಗೆ ನೀವು ಹಣಕಾಸಿನ ವ್ಯವಹಾರ ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿ ಮತ್ತು ನಿಮ್ಮ ನಡುವೆ ಹಣಕಾಸಿನ ವ್ಯವಹಾರ ಇದ್ದರೂ, ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ವಾದಿ ಯಾರ್ಯಾರ ಜೊತೆಯಲ್ಲಿ ಹಣಕಾಸಿನ ವ್ಯವಹಾರ ಮಾಡುತ್ತಿದ್ದಾರೆಂಬ ವಿಚಾರ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆಯ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ದಾವೆಯ ಬಗ್ಗೆ ಏನು ಗೊತ್ತು ಎಂದರೆ ಸಾಕ್ಷಿ ದಾವೆ ಬಗ್ಗೆ ಗೊತ್ತಿಲ್ಲ, ಹಣಕಾಸಿನ ಬಗ್ಗೆ ದಾವೆ ಹೂಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ವಾದಿ ಮಂಜುಳ ಎಂಬುವವರ ಮೇಲೆ ಹಣಕಾಸಿನ ವ್ಯವಹಾರದ ಸಂಬಂಧ ದಾವೆ ಹೂಡಿದ್ದು, ಅದರ ಸಂಬಂಧ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೀರಿ ಎಂದರೆ ಸರಿ. ವಾದಿಯೇ ನಿಮ್ಮನ್ನು ನ್ಯಾಯಾಲಯಕ್ಕೆ ಹೇಳಿ ಕರೆತಂದಿರುತ್ತಾರೆಂದರೆ ಸರಿ. ವಾದಿ ಹಾಗೂ ಮಂಜುಳ ರವರ ನಡುವೆಯಾದ ವ್ಯವಹಾರದ ವಿಚಾರ ಹೊರತುಪಡಿಸಿ ಬೇರೆ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸರಿ. ದಾವೆಯ ವಿಚಾರ ನಿಮಗೆ ಗೊತ್ತಿಲ್ಲದೇ ಇದ್ದರೂ, ವಾದಿಯ ಪ್ರಚೋದನೆ ಮೇರೆಗೆ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೀರಿ ಎಂದರೆ ಸರಿಯಲ್ಲ.

ವಾದಿ ತಮ್ಮ ವಕೀಲರ ಬಳಿ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಸಿದ್ದು, ಅದಕ್ಕೆ ನೀವು ಸಹಿ ಮಾಡಿರುತ್ತೀರಿ ಎಂದರೆ ಸರಿ. ವಾದಿ ಸುಳ್ಳು ಪ್ರಮಾಣ ಪತ್ರವನ್ನು ತಯಾರಿಸಿದ್ದು, ಅದಕ್ಕೆ ನೀವು ಸಹಿ ಮಾಡಿ, ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ನನಗೆ ಓದಲು ಬರದೇ ಇರುವುದರಿಂದ ಸಹಿ ಮಾಡಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.